<u>ದಿನಾಂಕಃ 27.02.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ</u>

<u>ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಎಸ್ ಕೆ ಪಿ ವಕೀಲರಿಂದ ಃ</u>

1) ನಾನು ಎಲೆಕ್ಟ್ರಿಕಲ್ ವಿಷಯದಲ್ಲಿ ಡಿಪ್ಲೋಮಾ ಓದಿದ್ದೇನೆ. ಡಿಪ್ಲೋಮಾ ಮುಗಿದ ಮೇಲೆ ನಾನು ವೃತ್ತಿಗೆ ಹೋಗಿದ್ದೆನು. ನಾನು ಜಿಗಣಿಯಲ್ಲಿ ಕೆಲಸ ಮಾಡುತ್ತಿದ್ದೆನು. 2018 ನೇ ಇಸವಿಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದೆ, ನನ್ನ ಮದುವೆ ಆಗುವವರೆಗೆ ಕೆಲಸಕ್ಕೆ ಹೋಗುತ್ತಿದ್ದೆನು. ಕೆಲಸಕ್ಕೆ ಹೋಗುತ್ತಿದ್ದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ವಾಸವಿದ್ದೆ. ನನ್ನ ಮದುವೆಯಾದ ಮೇಲೆ ಸಹ ನಾನು ಬೆಂಗಳೂರಿನಲ್ಲಿ ವಾಸ ಇದ್ದೇನೆ. ಕನ್ನಡ ಮತ್ತು ಇಂಗ್ಲೀಷ್ ನನಗೆ ಓದಲು ಮತ್ತು ಬರೆಯಲು ಬರುತ್ತದೆ. ಚಾಸಾ.4 ಹರೀಶ ರವರ ತಂದೆ ತಾಯಿ ಹೆಸರು ನನಗೆ ಗೊತ್ತಿಲ್ಲ.

2) ಗಲಾಟೆಯಾಗಿದ್ದ ದಿಃ21.05.2020 ಸಮಯ ಸಂಜೆ 6.00 ಗಂಟೆಯಿಂದ 6.30 ಆಗಿತ್ತು. ಚೇತನ್ ನನಗೆ ತಮ್ಮನಾಗಬೇಕು. ನನ್ನ ತಮ್ಮನ ಮೇಲೆ ಕೊಲೆ ಪ್ರಯತ್ನ ನಡೆದಿದೆ ಎಂದು ಹೇಳಿ ಆ ದಿವಸ ಹೋಗಿ ದೂರು ನೀಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ. ದೊಡ್ಡೇಗೌಡನಕೊಪ್ಪಲಿನಲ್ಲಿ ಕೊಲೆ ಪ್ರಯತ್ನ ನಡೆದಿತ್ತು. ದೊಡ್ಡೇಗೌಡನಕೊಪ್ಪಲಿನಲ್ಲಿ ನಮ್ಮ ಮನೆ, ಆರೋಪಿಗಳ ಮನೆ ಅಲ್ಲದೇ ಬೇರೆ ಸಾರ್ವಜನಿಕರ ಮನೆಗಳು ಇವೆ ಎಂದರೆ ಸರಿ.

3) ನನ್ನ ಹೇಳಿಕೆಯಲ್ಲಿ, ಚೇತನ್ ಕೆಂಪೇಗೌಡನ ಕೈಯಿಂದ ಕುಡಗೋಲು ಮತ್ತು ವಿದ್ಯಾ ಕೈಯಿಂದ ದೊಣ್ಣೆಯನ್ನು ಕಿತ್ತುಕೊಂಡನು ಎಂದು ಹೇಳಿಕೆಯಲ್ಲಿ ಹೇಳಿರುವುದು ಯಾವ ಚೇತನ್ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು, ಸಾಕ್ಷಿದಾರ ಚೇತನ್ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಸಾಕ್ಷಿಯಲ್ಲಿ, ಚಾಸಾ4 ಹರೀಶ್ ರವರು, ಆರೋಪಿಗಳನ್ನು ಕುಡಗೋಲು ಮತ್ತು ಕೋಲನ್ನು ಕಿತ್ತುಕೊಂಡರು ಎಂದು ನ್ಯಾಯಾಲಯದಲ್ಲಿ ಮೊದಲ ಬಾರಿಗೆ ಹೇಳಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಸಾಕ್ಷಿಯಲ್ಲಿ, ದಿಃ21.05.2020 ರಂದು ಸಂಜೆ 6.00 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿ ಇದ್ದೆನು ಎಂದು ಹೇಳಿದ್ದೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಸಾಕ್ಷಿಯಲ್ಲಿ, ನಾನು, ನನ್ನ ತಂದೆ, ತಾಯಿ ಮತ್ತು ಚಾಸಾ 3 ಎಲ್ಲರೂ ನನ್ನ ತಾಯಿ ಮನೆಯಲ್ಲಿ ಇದ್ದೆವು ಎಂದು ಹೇಳಿದ್ದೇನೆ ಎಂದರೆ ಸರಿ.

4) ನನ್ನ ಹೇಳಿಕೆಯಲ್ಲಿ, '' ವಿದ್ಯಾ ತನ್ನ ಕೈಯಲ್ಲಿ ಇದ್ದ ದೊಣ್ಣೆಯಿಂದ, ಚೇತನ್ ನನ್ನು ಕೊಲೆ ಮಾಡುವ ಉದ್ದೇಶದಿಂದ, ಚೇತನ್ ನ ತಲೆಗೆ ಬೀಸಿದಾಗ, ಚೇತನ್ ಕೆಳಗೆ ಕುಳಿತುಕೊಂಡು ತಪ್ಪಿಸಿಕೊಂಡ'' ಎಂದು ಹೇಳಿದ್ದೇನೆ ಎಂದರೆ ಸರಿ. ನ್ಯಾಯಾಲಯದಲ್ಲಿ ನನ್ನ ಸಾಕ್ಷಿಯಲ್ಲಿ, '' 2 ನೇ ಆರೋಪಿತೆ ವಿದ್ಯಾ, ಚಾಸಾ.1 ರವರ ಕತ್ತಿನ ಹಿಂಭಾಗಕ್ಕೆ ದೊಣ್ಣೆಯಿಂದ ಹೊಡೆದರು '' ಎಂದು ಹೇಳಿದ್ದೇನೆ ಎಂದರೆ ಸರಿ. ಈ ಘಟನೆಯ ವಿಚಾರವಾಗಿ ನಾನು ಪೊಲೀಸ್ ಠಾಣೆಗೆ ಸಾಕ್ಷಿ ಹೇಳುವುದಕ್ಕೆ ಹೋಗಿದ್ದೆನು. ಪೊಲೀಸರ ಮುಂದೆ ಸಾಕ್ಷಿ ಹೇಳುವುದಕ್ಕೆ ಹೊಗಿದ್ದೆನು. ಪೊಲೀಸರ ಹೆಸರು ಗೊತ್ತಿಲ್ಲ. ಪೊಲೀಸು, ಪುರುಷ ಪೊಲೀಸ್ ಆಗಿದ್ದರು. ಜಗಳ ಆಗಿ 2 ದಿವಸಕ್ಕೆ ಪೊಲೀಸ್ ಠಾಣೆಗೆ ಸಾಕ್ಷಿ ಹೇಳಲು ಹೋಗಿದ್ದೆನು.

5) '' ದಿಃ 21.05.2020 ರಂದು ಸಂಜೆ 6.00 ಕ್ಕೆ ನನ್ನ ತಮ್ಮ ಚಾಸಾ 1 ರವರು ಹಸುವಿಗೆ ಮೇವನ್ನು ತೆಗೆದುಕೊಂಡು ನ ಮ್ಮ ತಾಯಿಯ ಮನೆಯಿಂದ, ಕೊಟ್ಟಿಗೆಗೆ ಆರೋಪಿತರ ಮನೆಯ ಮುಂದೆ ಇದ್ದ ಮಣ್ಣಿನ ರಸ್ತೆಯಲ್ಲಿ ಹೋಗುತ್ತಿದ್ದಾಗ, 1 ನೇ ಆರೋಪಿ ಕೆಂಪೇಗೌಡ, ನಮ್ಮ ಮನೆ ಮುಂದೆ ಓಡಾಡುತ್ತೀರಾ ಎಂದು ಜಗಳ ಮಾಡುತ್ತಿದ್ದರು. ಆಗ ನಾನು, ನನ್ನ ತಾಯಿ, ನನ್ನ ತಂದೆ ಮತ್ತು ಚಾಸಾ 3 ಎಲ್ಲರೂ ನನ್ನ ತಾಯಿ ಮನೆಯಲ್ಲಿ ಇದ್ದೆವು. ಜೋರುಜೋರಾಗಿ ಜಗಳ ಆಡುತ್ತಿದ್ದರು, ಬೈಯುತ್ತಿದ್ದರು, ಗಲಾಟೆ ಶಬ್ದ ನಮಗೆ ಕೇಳಿಸಿತು. ಆಗ ನನ್ನ ತಾಯಿ ಮತ್ತು ಚಾಸಾ 3 ರವರು ಹೋಗಿ, ಚಾಸಾ 1 ನನ್ನ ತಮ್ಮನನ್ನು ನಮ್ಮ ಮನೆಯ ಮುಂದೆ ಕರೆದುಕೊಂಡು ಬಂದರು. ನಂತರ 1 ರಿಂದ 5 ನೇ ಆರೋಪಿಗಳು ನಮ್ಮ ಮನೆಯ ಮುಂದೆ ಬಂದರು. 1 ನೇ ಆರೋಪಿತ ಕುಡ್ಲನ್ನು ತಂದಿದ್ದರು. 2 ನೇ ಆರೋಪಿತೆ ದೊಣ್ಣೆಯನ್ನು ತಂದಿದ್ದಳು. ಆರೋಪಿಗಳು ಜೋರುಜೋರಾಗಿ ಜಗಳ ಆಡಿಕೊಂಡು ನಮ್ಮ ಮನೆಯ ಮುಂದೆ ಬಂದಿದ್ದರು. 5 ನೇ ಆರೋಪಿತ ಬಂದು, ಚಾಸಾ 1 ಚೇತನ್ ಇದ್ದರೆ ತಾನೇ ಮನೆ ಮುಂದೆ ಓಡಾಡುವುದು, ಅವನನ್ನು ಸಾಯಿಸಿ ಹಾಕಿ ಎಂದು ಕುಮ್ಮಕ್ಕು ಕೊಟ್ಟರು. ಆಗ 1 ನೇ ಆರೋಪಿತ, ಚಾಸಾ 1 ಚೇತನ್ ರವರ ತಲೆಗೆ ಕುಡಗೋಲಿಂದ ಬೀಸಲು ಹೋದಾಗ ಚಾಸಾ 1 ರವರು ಬಲಗೈಯಿಂದ ತಡೆದಾಗ, ಬಲಗೈನ ಮುಂಗೈಗೆ ಏಟಾಯಿತು. 2 ನೇ ಆರೋಪಿತೆ ವಿದ್ಯಾ ದೊಣ್ಣೆಯಿಂದ ಚಾಸಾ 1 ರವರ ಕತ್ತಿನ ಹಿಂಭಾಗಕ್ಕೆ ಹೊಡೆದಳು. ಆಗ ಚಾಸಾ.1 ಕೆಳಗೆ ಕುಳಿತುಕೊಂಡನು. ಆಗ 3 ನೇ ಆರೋಪಿತೆ ಕಾಲಿನಿಂದ ಚಾಸಾ 1 ರವರ ಬೆನ್ನಿಗೆ ಒದ್ದಳು. 4 ನೇ ಆರೋಪಿತ, ಇನ್ನೊಂದು ಸಾರಿ ಓಡಾಡಿದರೆ ನಿನ್ನನ್ನು ಸಾಯಿಸುತ್ತೇನೆ ಎಂದು ಬೈದನು. ಚಾಸಾ.3 ಮತ್ತು ಚಾಸಾ.4 ಹರೀಶ್ ರವರು ಆರೋಪಿಗಳಿಂದ ಕುಡಗೋಲಿನಿಂದ ಮತ್ತು ಕೋಲನ್ನು ಕಿತ್ತುಕೊಂಡರು. ಚಾಸಾ 1 ಗಾಯಾಳುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಆರೋಪಿಗಳು, ನೀನು ನಮ್ಮ ಮನೆಯ

ಮುಂದೆ ಓಡಾಡಿದರೆ, ನಿನ್ನನ್ನು ಬಿಡುವುದಿಲ್ಲ, ನಿನ್ನನ್ನು ಸಾಯಿಸುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿ ಹೊರಟು ಹೋದರು. ಚಾಸಾ.1 ರವರಿಗೆ ಅವರ ಬಲಗೈನ ಅಂಗೈಗೆ, ತೋಳಿಗೆ ಗಾಯವಾಗಿತ್ತು. 1 ನೇ ಆರೋಪಿತ ಕೆಂಪೇಗೌಡ ಬೀಸಿದ ಕುಡಗೋಲು ಚಾಸಾ 1 ರವರ ತಲೆಗೆ ತಾಗಿದ್ದರೆ, ಚಾಸಾ 1 ರವರ ಸಾವು ಆಗುತ್ತಿತ್ತು '' ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

6) ಮುದ್ದೆ ಮಾಲುಗಳಾದ ಕುಡಲು ಮತ್ತು ದೊಣ್ಣೆಗಳು ಘಟನೆಗಿಂತ ಮುಂಚೆ ನಮ್ಮ ಮನೆಯಲ್ಲಿ ಇದ್ದವು ಎಂದರೆ ಸರಿಯಲ್ಲ. ಸಳ್ಳು ಪ್ರಕರಣವನ್ನು ಸೃಷ್ಟಿಸುವುದಕ್ಕೋಸ್ಕರ, ನಮ್ಮ ಮನೆಯಲ್ಲಿ ಇದ್ದ ಕುಡಲು ಮತ್ತು ದೊಣೆಗಳನ್ನು ಈ ಪ್ರಕರಣಕ್ಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣಾ ನಂತರ, ಅವರ ಹೆಸರಿನಲ್ಲಿ ಇದ್ದ, ಎಲ್ಲಾ ಆಸ್ತಿಗಳು ಪೌತಿ ಖಾತೆ ಮೂಲಕ, ನನ್ನ ತಾಯಿಯ ಹೆಸರಿಗೆ ಬಂದಿದೆ ಎಂದರೆ ಸರಿ. ಈ ಎಲ್ಲಾ ಸ್ವತ್ತುಗಳು, ನನ್ನ ತಂದೆ ಮತ್ತು 1 ನೇ ಆರೋಪಿ ಕೆಂಪೇಗೌಡ ರವರ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ನನ್ನ ತಾಯಿಯ ಹೆಸರಿನಲ್ಲಿ ಒಟ್ಟು ಎಷ್ಟು ಎಕರೆ ಜಮೀನಿನ ಆರ್.ಟಿ.ಸಿ ಇದೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಯ ಹೆಸರಿನಲ್ಲಿ, 4 ಎಕರೆ 20 ಗುಂಟೆ ಗಿಂತ ಹೆಚ್ಚಿಗೆ ಆರ್ ಟಿ ಸಿ ಇದೆ ಎಂದರೆ ಸರಿಯಲ್ಲ. 1 ನೇ ಆರೋಪಿ ಕೆಂಪೇಗೌಡನ ಹೆಸರಿನಲ್ಲಿ ಕೇವಲ 1 ಎಕರೆ 20 ಗುಂಟೆಗೆ ಮಾತ್ರ ಆರ್ ಟಿ ಸಿ ಇದೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ಸಮಭಾಗ ಆಗಿಲ್ಲ ಎಂದು, 2 ನೇ ಆರೋಪಿ ವಿದ್ಯಾ ಮತ್ತು 4 ನೇ ಆರೋಪಿ ವಿನಯ್ ಕುಮಾರ್, ನಾಗಮಂಗಲ ಸಿವಿಲ್ ನ್ಯಾಯಾಲಯದಲ್ಲಿ ಸಮಭಾಗಕ್ಕೆ ಅಸಲು ದಾವೆ 316/2019 ನ್ನು ನನ್ನ ಮೇಲೆ ಹಾಕಿದ್ದಾರೆ ಎಂದರೆ ಸಾಕ್ಷಿಯು, ನನ್ನ ಮೇಲೆ ಹಾಕಿಲ್ಲ ಎನ್ನುತ್ತಾರೆ.

7) ಈ ಹಂತದಲ್ಲಿ ಆರೋಪಿ ಪರ ವಕೀಲರು, ಸಾಕ್ಷಿಗೆ ಕಟಕಟೆಯಲ್ಲಿ, ಅಸಲು ದಾವೆ 316/2019 ವಾದ ಪತ್ರದ ದೃಢಿಕೃತ ನಕಲನ್ನು ತೋರಿಸಿ, ಇದರಲ್ಲಿ ಸಾಕ್ಷಿಯನ್ನು ಪ್ರತಿವಾದಿಯಾಗಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿದ್ದರಿಂದ, ಈ ದಾಖಲೆಯನ್ನು ನಿಡಿ.3 ಎಂದು ಗುರುತಿಸಲಾಯಿತು. ಈ ದಾವೆಯನ್ನು ಹಿಂದೆ ತೆಗೆಸಸಬೇಕು ಎಂಬ ದುರುದ್ದೇಶದಿಂದ, ಒತ್ತಡ ಹಾಕುವ ಉದ್ದೇಶದಿಂದ, ಆರೋಪಿಗಳ ಮೇಲೆ , ನಾನು, ನನ್ನ ತಮ್ಮ ಮತ್ತು ನನ್ನ ತಾಯಿ ಸೇರಿಕೊಂಡು, ಸುಳ್ಳು ದೂರನ್ನು ಆರೋಪಿಗಳ ಮೇಲೆ ನೀಡಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ, ನಾವು 3 ಜನ ಸೇರಿಕೊಂಡು, ಸುಳ್ಳು ಮುದ್ದೇಮಾಲುಗಳನ್ನು ಸೃಷ್ಟಿಸಿ ಸಳ್ಳು ಸಾಕ್ಷಿ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಹೇಳಿದ

ರೀತಿ ಯಾವುದೇ ಘಟನೆ ನಡೆಯದೇ ಇದ್ದರೂ ಸಹ, ಸುಳ್ಳು ಹೇಳಿಕೆಯನ್ನು ನೀಡಿ, ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ತಪ್ಪನ್ನು ಮಾಡದೇ ಇದ್ದರೂ ಸಹ, ವಿಭಾಗಕ್ಕೆ ಹಾಕಿರುವ ದಾವೆಯನ್ನು ಹಿಂದಕ್ಕೆ ತೆಗೆಸಿಕೊಳ್ಳುವ ದುರುದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

<u>ಮರು ವಿಚಾರಣೆ: </u>ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.